ನಿಯಮ ೩೫೪ರ ಕೆಳಗೆ ನಾನು ಪ್ರಸ್ತಾಪ ಮಾಡಿದ್ದಾಗ ಸನ್ಮಾನ್ಯ ವೀರಪ್ಪಮೊಯಿಲಿಯವರು ಅದಕ್ಕೆ ಉತ್ತರಿಸುವುದಾಗಿ ಹೇಳಿದ್ದರು. ಈಗ ಆ ಉತ್ತರವನ್ನು ಸರಕಾರದ ಪರವಿಯಿಂದ ಕೊಡುತ್ತೀರಾ?

ಅಧ್ಯಕ್ಷರು.—ಆಯಿತು ಕೊಡುತ್ತಾರೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಯವರು).— ಮಾನ್ಯ ಅಧ್ಯಕ್ಷರೆ, ನಾನು ಈಗ ಪರ್ಯಾಲೋಚನಾ ಪ್ರಸ್ತಾಪವನ್ನು ಮಂಡಿಸುತ್ತೇನೆ ಪ್ರಸ್ತಾವ ಹೀಗಿದೆ "1990ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

† ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೆ, ಈ ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ಮಾನ್ಯ ಕಾನೂನು ಸಚಿವರು ಮಂಡಿಸಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಈ ಒಂದು ತಿದ್ದುಪಡಿಯನ್ನು ನಾವು ಸಹ ನಮ್ಮ ಸರಕಾರ ಇದ್ದಾಗ ತರಬೇಕೆಂದು ಆಲೋಚನೆ ಮಾಡಿ ನಿರ್ಣಯವನ್ನು ಸಹ ತೆಗೆದುಕೊಂಡಿದ್ದೇವೆ. ಇವೊತ್ತು ಸಮಾಜದಲ್ಲಿ ಮಹಿಳೆಯರಿಗೆ ನಿಜವಾದ ಒಂದು ಇಕಾನಮಿಕ್ ಸ್ಟೇಟಸ್ ಕೊಡಬೇಕಾದರೆ ಅದು ಈ ಒಂದು ಮಸೂದೆಯಿಂದ ಸಾಧ್ಯವಾಗಬಹುದು ಎಂದು ನನಗನ್ನಿಸುತ್ತದೆ. ಅದೇ ಪ್ರಕಾರ ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಒಂದು ಸಮಾನವಾದ ಹಕ್ಕು ಇರಬೇಕೆಂದು ಹೇಳುತ್ತೇವೆ. ಆದರೆ ಹಿಂದೂ ಉತ್ತರಾಧಿಕಾರ ಆಕ್ಟ್ ೧೯೫೬ರ ಪ್ರಕಾರ ಕೇವಲ ಸೆಕ್ಸ್ ಆಧಾರದ ಮೇಲೆ ಇವೊತ್ತು ನಾವು ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಅಧಿಕಾರವನ್ನು ಕೊಡುತ್ತಾ ಇಲ್ಲ. ಆದರಿಂದ ಈ ಮಸೂದೆಯಿಂದ ಸೋಷಿಯಲ್ ಜಸ್ಟೀಸ್ ಆಗಬಹುದು. ಆದರೆ ಈ ಹಿಂದೂ ಉತ್ತರಾಧಿಕಾರ ಮಸೂದೆಯಲ್ಲಿ after Section-6,-6A ಎಂದು ಇನ್‌ಕಾರ್ಪೊರೇಟ್ ಮಾಡಿದ್ದಾರೆ.

"6A. Equal rights to daughter in coparcenary property.--Notwithstanding anything contained in section 6 of this Act.-

(a) in a joint Hindu family governed by Mitakshara law, the daughter of a coparcener shall by birth become a coparcener in her own right in the same manner as the son and have the same rights in the coparcenery property as she should have had if she had been a son, inclusive of the right to claim by survivorship, and shall be subject to the same liabilities and disabilities in respect* there to as the son."

This is according to Section 6A. Further Section 6(d) says:

"Nothing in clause (b) shall apply to a daughter married prior to or to a partition which had been effected before the commencement of Hindu Succession (Karnataka Amendment) Act, 1990."

ಅಂದರೆ ಈ ಮಸೂದೆಗೆ ಯಾವ ದಿನ ಮನ್ನಣೆ ಸಿಗುತ್ತದೆ ಆ ದಿನದಿಂದ ಜಾರಿಗೆ ಬರುತ್ತದೆ ಜಾರಿಗೆ ಬರುವುದಕ್ಕಿಂತ ಮುಂಚೆ partition ಆದರೆ: ಆ ಒಂದು ಹೆಣ್ಣುಮಕ್ಕಳ ಮದುವೆ ಆದರೆ ಆಕೆಗೆ ಆ ಒಂದು ಅಧಿಕಾರ ಸಿಗುವುದಿಲ್ಲ. I respectfully submit to the Hon'ble Speaker that this

is totally contrary to the spirit of Section 6A(a) and Section 6b. ಆದರೆ ಇದರಲ್ಲಿ "...shall by birth become coparcener in her own right" ಎಂದು ಇದೆ. Once she is born in Mitakshara family by birth she is getting the right.

12-15 P.M.

But 6(B) has become an estoppel. Even though she satifies all the conditions in 6 (A) or 6 (B), but if she has married, when the bill gets the assent or the partition has taken place earlier to that, she is denied the right. I don't think this will stand the test of law in the Courts. When you are talking of social justice and when we say equal opportunities, equal rights will have to be given to the women, how could we deny this? I humbly submit that the Act will have to be given retrospective effect. If you really mean to give economic status to women, if you want dowry deaths to be curtalied, if you want that social justice be done, this Act will have to be given retrospective effect. Suppose the Act is passed in the same form, suppose a person has two daughters and one daughter is married and the other is to get married, a daughter who is married will not get any share. How can you call this as social justice ? It will create further bad relations in the family. It will create harassment of that lady who is already married saying that she will not be getting a share and the other one who is not married is getting, just because she is married. If you want to really remove the evils in the society and if the intention of the Government is really to give economic status or the social justice to the women, then, this should be given retrospective effect, and not prospective one.

Another point I would like to mention is this : I would like to caution the Government on one point. As per the Act, the Son has a right when he becomes a major to ask for partition, but the daughter does not have a right nor even the wife has a right. It is only when the partition is made, they are entitled.

Under Section 6(A), you have given a right to her. Suppose you decide not to partition, the father & Sons say:We don't want partition in the family, then she is not entitled to her share. She cannot claim her share. that is the problem. Thovgh legally she is entitled, she cannot get it, as such the intention of bringing this legislation is defeated, her right will not be fulfilled. When there is no right to her to ask for partition what is the use of this legislation? Just on records she will be entitled because of her birth but if that property does not pass to her, there is no meaning, Further, when you talk of rights, liabilities are also there. What about the liabilities ? Suppose there are assets, it is alright ; but suppose there are liabilities in the family, then liabilities also devolve on her

because in Section 6 (A), you have said "inclusive of the right to claim by survivorship and shall be subject to the same liabilities and disabilities in respect thereto as the son". The Son has a duty to discharge the liabilities of his father. Now you have brought the daughter also to the debt status. When the daughter is married and the husband says "No, this Rs. 10,000 liability which your brother is asking I will not give". Then, what would be the position? Whether the Government has thought of this? If there are liabilities in the family, how these liabilities are met? When she claims her right, he should also shoulder the liabilities, If you want to protect women a family child or a female member, you will have to consider this and make some provisons as to how you can protect her from the liabilities which I don't think the Bill anywhere stipulates.

ಶ್ರೀ ಆರ್. ಎನ್. ನಾಯಕ್.—ಹೆಣ್ಣು ಮಕ್ಕಳಿಂ ಪಾಲು ತೆಗೆದುಕೊಂಡ ಮೇಲೆ ಸಾಲ ತೀರಿಸಲು ಕೂಡ ಜವಾಬ್ದಾರಿ ಇದೆ ಎಂದು ತಾವು ಹೇಳಿದಿರಿ. ಆಸ್ತಿ ತೆಗೆದುಕೊಂಡ ಮೇಲೆ ಸಾಲ ತೀರಿಸುವ ಜವಾಬ್ದಾರಿ ಪಡೆಯಲೇಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಹೇಳುತ್ತಿರುವುದೂ ಅದನ್ನೇ. ಆಸ್ತಿಯನ್ನು ತೆಗೆದುಕೊಂಡ ನಂತರ ಲಯಬಿಲೀಟಿಸ್‌ಗೂ ಜವಾಬ್ದಾರರಾಗುತ್ತಾರೆ. ಆದರ ಬಗ್ಗೆ ಮಸೂದೆಯಲ್ಲಿ ಏನೂ ಇಲ್ಲ. ಇದರ ಬಗ್ಗೆ ಸರ್ಕಾರದ ಏನೂ ಪೊಸಿಷನ್ ಇಲ್ಲ ಎಂದು ಹೇಳುತ್ತಿದ್ದೇನೆ. ಈಗಾಗಲೇ ನಾನು ಹೇಳಿದ ಹಾಗೆ This bill will not stand the test of law, because it has got several defects. ಸರ್ಕಾರದ ಇನ್‌ಟೆನ್‌ಷನ್ ಓಟ್ ಕ್ಯಾಚ್ ಮಾಡಲಿಕ್ಕೆ ಇಂತಹ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಿ ನಂತರ ಅದು ಹೈಕೋರ್ಟಿನಲ್ಲಿ ಸ್ಟೇ ಮಾಡಿದರೆ ಮಾಡಲಿ ಎಂಬ ಉದ್ದೇಶ ಇದ್ದರೆ ನಮ್ಮದೇನೂ ಅಭ್ಯಂತರ ಇಲ್ಲ. ಹೇಗಿದ್ದರೂ ನಿಮ್ಮದು ಮಜಾರಿಟಿ ಇದೆ, ಪಾಸ್ ಮಾಡಿಕೊಳ್ಳಿ. you can do it. You have got the majority but if you really want to implement this bill I would request the Hon'ble Minister through Hon'ble Speaker to re-examine this Bill before it is passed in the House.

In section 68 you have said :

> "When a female Hindu die after the commencement of the Hindu Succession (Karnataka Amendment) Act, 1990, having at the time of her death an interest in a Mitakshara coparcenary property, her interest in the property shall devolve by survivorship upon the surviving members of the coparcenary and not in accordance with this Act ;
>
> Provided that if the deceased had left any child or child of a pre-deceased child, the interest of the deceased in the Mitakshara coparcenary property shall devolve by testamentary or intestate succsssion, as the case may be, under this Act and not by survivorship".

Now tell me, if she has no female child and she has an husband surviving, what about that ? Under the Hindu Succession Act 1956, there are 1 and 2 Scheduleas. In Schedule 1, there are certain categories who are entitled like Son, Daughter, Widow-mother. If she dies leaving her husband alone, then the husband is not entitled for any share. This will create complications and hurdles

in the families. ನಾವೂ ಕೂಡ ಮಕೀಲರು ಇದ್ದೇವೆ. ಪ್ರಶ್ನೆ ಏನು ಅಂದರೆ, ನಾವು ಇಲ್ಲಿ ಕಂಳಿತಿರುವುದು ಹೆಣ್ಣು ಮಕ್ಕಳಿಗೆ ಸಹಾಯ ಮಾಡಬೇಕು ಎಂದು. ಆದರೆ ಇದರಿಂದ ಸಹಾಯ ಆಗುವುದಿಲ್ಲ. ಕೆಲವು ಪ್ರಾವಿಷನ್‌ಗಳನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇವೊತ್ತು ನಾವು ಆಕ್ಟ್‌ಗೆ ವಿರೋಧ ಮಾಡುತ್ತಿಲ್ಲ. ಕೆಲವು ಸಜೆಷನ್‌ಗಳನ್ನು ಏನು ಕೂಟ್ಟಿದ್ದೇನೆ. ಆದನ್ನು ತಾವು ಪರಿಶೀಲಿಸಬೇಕು ಮತ್ತು ತಮ್ಮ ಉತ್ತರದಲ್ಲಿ ಆದರ ಬಗ್ಗೆ ಎನ್‌ಲೈಟನ್ ಮಾಡಬಹುದು ಎಂಬ ವಿಶ್ವಾಸ ನನಗೆ ಇದೆ. ಇವೊತ್ತು ಏನು ಮಾಡುತ್ತೀರೋ ಗೊತ್ತಿಲ್ಲ. ಒಂದು ಮಾತು ಮಾತ್ರ ನಿಜ. Karnataka has taken the lead. I don't think in our country any other State has brought such an amendment so far. So, we shoud be proud about it. We stand number one in the history of this country to give a right to a woman by incorporating Section 6-A. ಆದರೆ ಒಂದು ಸಮಸ್ಯೆ ಆಗಬಾರದು. ಕರ್ನಾಟಕದಲ್ಲಿರುವ ಹೆಣ್ಣನ್ನು ಮದುವೆಯಾದರೆ ಅಸ್ತಿ ಸಿಗತ್ತದೆಂದೂ ಹೇಳಿ, all the people of other States should not rush to Karnataka.

SHRI K. H. RANGANATH.—Will it happen ?

SHRI R. V. DESHPANDE.—It is likely. Everybody will rush to Karnataka to marry a lady here to get a share.

ಬಿ. ಹೆಚ್. ಬನ್ನಿಕೋಡ್.— ಕಾನೂನು ಬಂದ ಮೇಲೆ ಆಗಬಹುದು.

ಶ್ರೀ ಆರ್. ವಿ. ದೇಶಪಾಂಡೆ.—ತಾವು ಏನು ಈ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಿದ್ದೀರಿ, ಅದರಲ್ಲಿ ಸಾಕಷ್ಟು ಡಿಫೆಕ್ಟ್‌ಸ ಇವೆ. ಆ ಡಿಫೆಕ್ಟ್‌ಸ ಅನ್ನು ತಾವು ಸುಧಾರಿಸಿ, ಪುನರ್ ಪರಿಶೀಲನೆ ಮಾಡಿ ಇದಕ್ಕೆ ಈ ಮನೆಯ ಮನ್ನಣೆ ತೆಗೆದುಕೊಂಡರೆ ನಿಜವಾಗಿ ಹೆಣ್ಣು ಮಕ್ಕಳಿಗೆ ನ್ಯಾಯವಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ತಾವು ಆ ದೃಷ್ಟಿಯಿಂದ ಪ್ರಯತ್ನ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

Mr. Speaker, Section 30 is also very important. Whether Section 30 will take away the rights given by this enactment as per Section 6-A will also have to be examined. The Hindu Succession Act, 1956, Section-30 says.

> "Any Hindu may dispose of by will or other testamentary disposition any property, which is capable of being so disposed of by him, in accordance with the provisions of the Indian Succession Act, 1925, or any other law for the time being in force and applicable to Hindus".
>
> Explanation :—notwithstanding anything contained in this Act or in any other law for the time being in force, be deemed to be property capable of being disposed of by him or by her within the meaning of this sub-section.

What I am worried is under Section 30, a male Hindu in a mitakshara family has also a right to dispose of the property by will. Now, you are giving a right by incorporating Section 6-A and you are silent on Section 30. Whether section 30 will defeat Section 6-A ? This point also has to be examined by the Government. ಇಷ್ಟು ಹೇಳಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಾನು ಏನು ಕೆಲವು ಸಲಹೆಗಳನ್ನು ಕೂಟ್ಟಿದ್ದೇನೆ, ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅದನ್ನು ಪುನರ್ ಪರಿಶೀಲನೆ ಮಾಡಿ ನಾನು ಕೂಟ್ಟಂತಹ ಸಲಹೆಗಳು ಸರಿಯಿದ್ದರೆ, ಈ ಬಿಲ್ಲನ್ನು ವಿತ್‌ಡ್ರಾ ಮಾಡಿ ಪುನಃ ರಿ ಇಂಟ್ರಡ್ಯೂಸ್ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೆ, ಈ ಒಂದು ಹಿಂದೂ ಸಕ್ಸೇಷನ್ ಆಕ್ಟ್ ೧೯೫೬ಕ್ಕೆ ಹೊಸ ಕ್ರಾಂತಿಕಾರಿ ಶಾಸನವನ್ನು ಏನು ತಂದಿದ್ದಾರೆ ಇದನ್ನು ನಿಜವಾಗಿಯೂ ನಾವೆಲ್ಲರೂ ಸ್ವಾಗತ ಮಾಡಬೇಕಾದ ವಿಷಯವಾಗಿದೆ. ಬಹುಶಃ ಕಾನೂನು ತಜ್ಞರು ಆದರ ಬಗ್ಗೆ ಸಾಕಷ್ಟು ಪರಿಣಿತರು ಇದ್ದಾರೆ, ಅವರು ಅನೇಕ ಸಲಹೆಗಳನ್ನು ಕೊಡಬಹುದು. ಈ ಒಂದು ಕ್ರಾಂತಿಕಾರಿ ವಿಧೇಯಕದಿಂದ ಕಳೆದ ಅನೇಕ ವರ್ಷಗಳಿಂದ ಮಹಿಳೆಯರ ಮೇಲೆ ನಡೆಯುತ್ತಿದ್ದಂತಹ ಶೋಷಣೆಯನ್ನು ತಪ್ಪಿಸಿದಂತಾಗುತ್ತದೆ, ಮಾನವೆ ಆದನಂತರ ಅನೇಕ ಕಿರುಕುಳವನ್ನು ತಪ್ಪಿಸಿದಂತಾಯಿತು. ಕೇವಲ ತಂದೆತಾಯಿಗಳ ಮನೆಯಲ್ಲಿ ಸಾಕಷ್ಟು ಆಸ್ತಿಪಾಸ್ತಿಗಳು ಇದ್ದರೂ ಸಹ ಸವಲತ್ತು, ಅನುಕೂಲ ಅವರಿಗೆ ಸಿಗದೆ. ಗಂಡನ ಮನೆಗೆ ಹೋದಾಗ ಅಲ್ಲಿ ಬೇರೆಬೇರೆ ಕಾರಣಕ್ಕೆ ಇದುವರೆಗೂ ನಡೆಯತಕ್ಕಂತಹ ಅತ್ತೆ ಮಾವಂದಿರ ಕಾಟ ಏನಿತ್ತು ಆದನ್ನು ತಪ್ಪಿಸಿ ಮುಂದೆ ಬರುವಂತ ದಿವಸಗಳಲ್ಲಿ ಅವರನ್ನೂ ಸಹ ಗೌರವದಿಂದ ನೋಡುವಂತಹ ಒಂದು ಅವಕಾಶ ಇದರಿಂದ ಆಗುತ್ತದೆ. ಇದರ ವಿವರಣೆಗೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಯವರನ್ನು ವಿನಂತಿಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಮಾನ್ಯ ದೇಶಪಾಂಡೆಯವರು ಹೇಳಿದಹಾಗೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಬಹುಶಃ ನಮ್ಮ ದೇಶದಲ್ಲಿ ಆಂಧ್ರ ಪ್ರದೇಶದಲ್ಲಿ ಇದೇ ರೀತಿಯ ಶಾಸನ ಇದೆ ಎಂದು ಹೇಳುತ್ತಾರೆ. ಅದನ್ನು ತಾವು ಅಭ್ಯಾಸ ಮಾಡಿರಬಹುದು. ಆದರ ವಿವರವನ್ನು ನಮಗೆ ಒದಗಿಸಿಕೊಡಿ. ನಾನು ಸಲಹೆ ಕೊಡುವುದು ಏನೆಂದರೆ. ಈ ಕಾಯಿದೆಯನ್ನು ಇನ್ನೂ ಪರಿಣಾಮಕಾರಿಯನ್ನಾಗಿ ಮಾಡುವ ದೃಷ್ಟಿಯಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟು ಪರಿಶೀಲಿಸುವುದು ಒಳ್ಳೆಯದು. ಆದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವ ಪ್ರಯತ್ನ ಮಾಡಿದರೆ, ನಿಜವಾಗಿಯೂ ಮಹಿಳೆಯರಿಗೆ ಒಂದು ಸೋಶಿಯಲ್ ಜಸ್ಟೀಸ್ ಕಲ್ಪಿಸುವ ದೃಷ್ಟಿಯಿಂದ, ಒಂದು ಸೋಶಿಯಲ್ ಸೆಕ್ಯೂರಿಟಿ ಒದಗಿಸಿಕೊಡುವ ದೃಷ್ಟಿಯಿಂದ, ಈ ಕಾಯಿದೆಯನ್ನು ಏನು ತರುತ್ತಿದ್ದಾರೆ ಆದರ ಉಪಯೋಗ ನಿಜವಾಗಿಯೂ ಆಗುತ್ತದೆ. ಈ ಬಗ್ಗೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿರುವುದರಿಂದ, ತಾವು ಅವಸರವಾಗಿ ತೀರ್ಮಾನ ತೆಗೆದುಕೊಂಡು ಈ ಕಾಯಿದೆಯನ್ನು ತರುವುದು ಸೂಕ್ತವಲ್ಲ. ಈ ಕಾಯಿದೆ ತರುವುದನ್ನು ಯಾರೂ ಕೂಡ ವಿರೋಧ ಮಾಡುವುದಿಲ್ಲ. ಬಹಳ ಹಿಂದೆಯೇ ಈ ಕಾಯಿದೆಯನ್ನು ಜಾರಿಗೆ ತಂದು ಮಹಿಳೆಯರಿಗೆ ವಿಶೇಷವಾಗಿ ಅನುಕೂಲ ಮಾಡಿಕೊಡತಕ್ಕ ಪ್ರಯತ್ನ ಆಗಬೇಕಿತ್ತು. ಆದರೂ ಕೂಡ ಈ ದಿಶೆಯಲ್ಲಿ ದಿಟ್ಟವಾದ ಹೆಜ್ಜೆಯನ್ನು ಇಡಲಾಗಿದೆ. ನಮ್ಮ ವಿಧಾನ ಸಭೆಯು ನಡವಳಿಕೆಯಲ್ಲಿ ಈ ರೀತಿ ವಿಧೇಯಕವನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಪರಿಶೀಲನಾ ಸಮಿತಿಗೆ ಅಥವಾ ಪರಿಷತ್ತಿನ ಸಮ್ಮತಿ ಪಡೆದು ಸದನದ ಸಂಯೋಕ್ತ ಸಮಿತಿಗೆ ಉಲ್ಲೇಖಿಸಬೇಕೆಂದು ಅಥವಾ ಪ್ರಸ್ತಾವವಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದೊಳಗೆ ಅದರ ಮೇಲೆ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಆ ಸದಸ್ಯರಿಗೆ ಕಳುಹಿಸತಕ್ಕದ್ದೆಂದು ತಿದ್ದುಪಡಿಯನ್ನು ಮಾಡಿಸಬಹುದೆಂದು ಒಂದು ಪ್ರಾವಿಷನ್ ಸಹ ನಮೂದಿದೆ. ಆದ್ದರಿಂದ ದಯವಿಟ್ಟು ಈ ಬಿಲ್ಲನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅದರಲ್ಲಿ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಿ, ನಂತರ ಸಭೆಯ ಮುಂದೆ ಇಡಬೇಕೆಂದು ಸನ್ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಹಾಗೂ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಈ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಸಮಯ ಇದೆ. ಇದಕ್ಕೆ ಎಲ್ಲರ ಬೆಂಬಲ ಇರುವುದರಿಂದ, ಯಾರೂ ಇದನ್ನು ವಿರೋಧ ಮಾಡುವ ಪ್ರಸಂಗವೇ ಬರುವುದಿಲ್ಲ. ಆದ್ದರಿಂದ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಪರಿಶೀಲಿಸಬೇಕು. ನಮ್ಮ ಮಾನ್ಯ ಸದಸ್ಯರಾದ ಶ್ರೀ ದೇಶಪಾಂಡೆಯವರ ಅಭಿಪ್ರಾಯವೂ ಸಹ ಇದೇ ಆಗಿದೆ. ಆದ್ದರಿಂದ ಈ ಬಿಲ್ಲನ್ನು ಆಪಸರದಿಂದ ಏಕಾಏಕಿ ತರುವುದು ಬೇಡ. ಈ ಬಿಲ್ಲನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಅಧ್ಯಕ್ಷರೆ, ಪ್ರಥಮ ಬಾರಿಗೆ ಈ ಮಹಿಳೆಯರಿಗೆ, ಹೆಣ್ಣು ಮಕ್ಕಳಿಗೆ ತನ್ನ ತಂದೆಯ ಆಸ್ತಿಯಲ್ಲಿ ಪಾಲನ್ನು ಪಡೆಯುವ ಕಾಯಿದೆಯನ್ನು ನಮ್ಮ ದೇಶದಲ್ಲಿ ಆಂಧ್ರ ಪ್ರದೇಶದಲ್ಲಿ ತರಲಾಯಿತು. ಆಂಧ್ರ ಪ್ರದೇಶದಲ್ಲಿ ತಂದ ನಂತರ, ಆಗಿನ ನಮ್ಮ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಕೂಡ ರಾಜ್ಯವಿಧಾನಮಂಡಲದಲ್ಲಿ ಮಾಡಿದ ರಾಜ್ಯಪಾಲರ ಭಾಷಣದಲ್ಲಿ ಹೆಣ್ಣು ಮಕ್ಕಳಿಗೂ ಸಹ ಪಾಲನ್ನು ಕೊಡುವುದಾಗಿ ಘೋಷಿಸಿದ್ದರು. ಆ ಘೋಷಣೆ ಪ್ರಕಾರವಾಗಿ, ಇವತ್ತಿನ ದಿವಸ ಸನ್ಮಾನ್ಯ ಕಾಯಿದೆ ಮಂತ್ರಿಯವರು ಈ ಒಂದು ಕಾಯಿದೆಯನ್ನು ನಮ್ಮ ರಾಜ್ಯದಲ್ಲಿ ತಂದಿದ್ದಾರೆ. ಅವರು ತಂದಂಥ ಈ ಕಾಯಿದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಅದರಲ್ಲಿ ಕೆಲವೊಂದು

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೆ, ಈ ಒಂದು ಹಿಂದೂ ಸಕ್ಸೇಷನ್ ಆಕ್ಟ್ ೧೯೫೬ಕ್ಕೆ ಹೊಸ ಕ್ರಾಂತಿಕಾರಿ ಶಾಸನವನ್ನು ಏನು ತಂದಿದ್ದಾರೆ ಇದನ್ನು ನಿಜವಾಗಿಯೂ ನಾವೆಲ್ಲರೂ ಸ್ವಾಗತ ಮಾಡಬೇಕಾದ ವಿಷಯವಾಗಿದೆ. ಬಹುಶಃ ಕಾನೂನು ತಜ್ಞರು ಆದರ ಬಗ್ಗೆ ಸಾಕಷ್ಟು ಪರಿಣಿತರು ಇದ್ದಾರೆ, ಅವರು ಅನೇಕ ಸಲಹೆಗಳನ್ನು ಕೊಡಬಹುದು. ಈ ಒಂದು ಕ್ರಾಂತಿಕಾರಿ ವಿಧೇಯಕದಿಂದ ಕಳೆದ ಅನೇಕ ವರ್ಷಗಳಿಂದ ಮಹಿಳೆಯರ ಮೇಲೆ ನಡೆಯುತ್ತಿದ್ದಂತಹ ಶೋಷಣೆಯನ್ನು ತಪ್ಪಿಸಿದಂತಾಗುತ್ತದೆ, ಮಾನವೆ ಆದನಂತರ ಅನೇಕ ಕಿರುಕುಳವನ್ನು ತಪ್ಪಿಸಿದಂತಾಯಿತು. ಕೇವಲ ತಂದೆತಾಯಿಗಳ ಮನೆಯಲ್ಲಿ ಸಾಕಷ್ಟು ಆಸ್ತಿಪಾಸ್ತಿಗಳು ಇದ್ದರೂ ಸಹ ಸವಲತ್ತು, ಅನುಕೂಲ ಅವರಿಗೆ ಸಿಗದೆ. ಗಂಡನ ಮನೆಗೆ ಹೋದಾಗ ಅಲ್ಲಿ ಬೇರೆಬೇರೆ ಕಾರಣಕ್ಕೆ ಇದುವರೆಗೂ ನಡೆಯತಕ್ಕಂತಹ ಅತ್ತೆ ಮಾವಂದಿರ ಕಾಟ ಏನಿತ್ತು ಆದನ್ನು ತಪ್ಪಿಸಿ ಮುಂದೆ ಬರುವಂತ ದಿವಸಗಳಲ್ಲಿ ಅವರನ್ನೂ ಸಹ ಗೌರವದಿಂದ ನೋಡುವಂತಹ ಒಂದು ಅವಕಾಶ ಇದರಿಂದ ಆಗುತ್ತದೆ. ಇದರ ವಿವರಣೆಗೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಯವರನ್ನು ವಿನಂತಿಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಮಾನ್ಯ ದೇಶಪಾಂಡೆಯವರು ಹೇಳಿದಹಾಗೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಬಹುಶಃ ನಮ್ಮ ದೇಶದಲ್ಲಿ ಆಂಧ್ರ ಪ್ರದೇಶದಲ್ಲಿ ಇದೇ ರೀತಿಯ ಶಾಸನ ಇದೆ ಎಂದು ಹೇಳುತ್ತಾರೆ. ಅದನ್ನು ತಾವು ಅಭ್ಯಾಸ ಮಾಡಿರಬಹುದು. ಆದರ ವಿವರವನ್ನು ನಮಗೆ ಒದಗಿಸಿಕೊಡಿ. ನಾನು ಸಲಹೆ ಕೊಡುವುದು ಏನೆಂದರೆ. ಈ ಕಾಯಿದೆಯನ್ನು ಇನ್ನೂ ಪರಿಣಾಮಕಾರಿಯನ್ನಾಗಿ ಮಾಡುವ ದೃಷ್ಟಿಯಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟು ಪರಿಶೀಲಿಸುವುದು ಒಳ್ಳೆಯದು. ಆದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವ ಪ್ರಯತ್ನ ಮಾಡಿದರೆ, ನಿಜವಾಗಿಯೂ ಮಹಿಳೆಯರಿಗೆ ಒಂದು ಸೋಶಿಯಲ್ ಜಸ್ಟೀಸ್ ಕಲ್ಪಿಸುವ ದೃಷ್ಟಿಯಿಂದ, ಒಂದು ಸೋಶಿಯಲ್ ಸೆಕ್ಯೂರಿಟಿ ಒದಗಿಸಿಕೊಡುವ ದೃಷ್ಟಿಯಿಂದ, ಈ ಕಾಯಿದೆಯನ್ನು ಏನು ತರುತ್ತಿದ್ದಾರೆ ಆದರ ಉಪಯೋಗ ನಿಜವಾಗಿಯೂ ಆಗುತ್ತದೆ. ಈ ಬಗ್ಗೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿರುವುದರಿಂದ, ತಾವು ಅವಸರವಾಗಿ ತೀರ್ಮಾನ ತೆಗೆದುಕೊಂಡು ಈ ಕಾಯಿದೆಯನ್ನು ತರುವುದು ಸೂಕ್ತವಲ್ಲ. ಈ ಕಾಯಿದೆ ತರುವುದನ್ನು ಯಾರೂ ಕೂಡ ವಿರೋಧ ಮಾಡುವುದಿಲ್ಲ. ಬಹಳ ಹಿಂದೆಯೇ ಈ ಕಾಯಿದೆಯನ್ನು ಜಾರಿಗೆ ತಂದು ಮಹಿಳೆಯರಿಗೆ ವಿಶೇಷವಾಗಿ ಅನುಕೂಲ ಮಾಡಿಕೊಡತಕ್ಕ ಪ್ರಯತ್ನ ಆಗಬೇಕಿತ್ತು. ಆದರೂ ಕೂಡ ಈ ದಿಶೆಯಲ್ಲಿ ದಿಟ್ಟವಾದ ಹೆಜ್ಜೆಯನ್ನು ಇಡಲಾಗಿದೆ. ನಮ್ಮ ವಿಧಾನ ಸಭೆಯು ನಡವಳಿಕೆಯಲ್ಲಿ ಈ ರೀತಿ ವಿಧೇಯಕವನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಪರಿಶೀಲನಾ ಸಮಿತಿಗೆ ಅಥವಾ ಪರಿಷತ್ತಿನ ಸಮ್ಮತಿ ಪಡೆದು ಸದನದ ಸಂಯೋಕ್ತ ಸಮಿತಿಗೆ ಉಲ್ಲೇಖಿಸಬೇಕೆಂದು ಅಥವಾ ಪ್ರಸ್ತಾವವಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದೊಳಗೆ ಅದರ ಮೇಲೆ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಆ ಸದಸ್ಯರಿಗೆ ಕಳುಹಿಸತಕ್ಕದ್ದೆಂದು ತಿದ್ದುಪಡಿಯನ್ನು ಮಾಡಿಸಬಹುದೆಂದು ಒಂದು ಪ್ರಾವಿಷನ್ ಸಹ ನಮೂದಿದೆ. ಆದ್ದರಿಂದ ದಯವಿಟ್ಟು ಈ ಬಿಲ್ಲನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅದರಲ್ಲಿ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಿ, ನಂತರ ಸಭೆಯ ಮುಂದೆ ಇಡಬೇಕೆಂದು ಸನ್ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಹಾಗೂ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಈ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಸಮಯ ಇದೆ. ಇದಕ್ಕೆ ಎಲ್ಲರ ಬೆಂಬಲ ಇರುವುದರಿಂದ, ಯಾರೂ ಇದನ್ನು ವಿರೋಧ ಮಾಡುವ ಪ್ರಸಂಗವೇ ಬರುವುದಿಲ್ಲ. ಆದ್ದರಿಂದ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಪರಿಶೀಲಿಸಬೇಕು. ನಮ್ಮ ಮಾನ್ಯ ಸದಸ್ಯರಾದ ಶ್ರೀ ದೇಶಪಾಂಡೆಯವರ ಅಭಿಪ್ರಾಯವೂ ಸಹ ಇದೇ ಆಗಿದೆ. ಆದ್ದರಿಂದ ಈ ಬಿಲ್ಲನ್ನು ಆಪಸರದಿಂದ ಏಕಾಏಕಿ ತರುವುದು ಬೇಡ. ಈ ಬಿಲ್ಲನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಅಧ್ಯಕ್ಷರೆ, ಪ್ರಥಮ ಬಾರಿಗೆ ಈ ಮಹಿಳೆಯರಿಗೆ, ಹೆಣ್ಣು ಮಕ್ಕಳಿಗೆ ತನ್ನ ತಂದೆಯ ಆಸ್ತಿಯಲ್ಲಿ ಪಾಲನ್ನು ಪಡೆಯುವ ಕಾಯಿದೆಯನ್ನು ನಮ್ಮ ದೇಶದಲ್ಲಿ ಆಂಧ್ರ ಪ್ರದೇಶದಲ್ಲಿ ತರಲಾಯಿತು. ಆಂಧ್ರ ಪ್ರದೇಶದಲ್ಲಿ ತಂದ ನಂತರ, ಆಗಿನ ನಮ್ಮ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಕೂಡ ರಾಜ್ಯವಿಧಾನಮಂಡಲದಲ್ಲಿ ಮಾಡಿದ ರಾಜ್ಯಪಾಲರ ಭಾಷಣದಲ್ಲಿ ಹೆಣ್ಣು ಮಕ್ಕಳಿಗೂ ಸಹ ಪಾಲನ್ನು ಕೊಡುವುದಾಗಿ ಘೋಷಿಸಿದ್ದರು. ಆ ಘೋಷಣೆ ಪ್ರಕಾರವಾಗಿ, ಇವತ್ತಿನ ದಿವಸ ಸನ್ಮಾನ್ಯ ಕಾಯಿದೆ ಮಂತ್ರಿಯವರು ಈ ಒಂದು ಕಾಯಿದೆಯನ್ನು ನಮ್ಮ ರಾಜ್ಯದಲ್ಲಿ ತಂದಿದ್ದಾರೆ. ಅವರು ತಂದಂಥ ಈ ಕಾಯಿದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಅದರಲ್ಲಿ ಕೆಲವೊಂದು

ಮನಸ್ಸಿನಲ್ಲಿ ದುಃಖಿಪಡುತ್ತಿದ್ದೆವು. ಏಕೆಂದರೆ, ತಂದೆಗೆ ಗಂಡುಮಕ್ಕಳು, ಹೆಣ್ಣುಮಕ್ಕಳು ಒಂದೆ. ಅಪರ ಆಸ್ತಿಯಲ್ಲಿ ಗಂಡುಮಕ್ಕಳಿಗೂ ಪಾಲು ಬರಬೇಕು ಹೆಣ್ಣುಮಕ್ಕಳಿಗೂ ಪಾಲು ಬರಬೇಕು, ಮಹಮ್ಮದನ್ ಕಾಯಿದೆ ಪ್ರಕಾರ ಮುಸಲ್ಮಾನರಲ್ಲಿ ಕಳೆದ ೧೪೦೦ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ, ಅದನ್ನು ಕೊಡುತ್ತಾ ಇದ್ದಾರೆ. ಯಾವ ತೊಂದರೆಯೂ ಇಲ್ಲ.

ಆದ್ದರಿಂದ ಈ ವಂಸೂದೆಯನ್ನು ಸ್ವಲ್ಪ ತಡವಾಗಿಯಾದರೂ ಕೂಡ ಇಲ್ಲಿ ತಂದಿದ್ದಾರೆ ಈಗಲಾದರೂ ಇದನ್ನು ಆದಷ್ಟು ಶೀಘ್ರವಾಗಿ ಜಾರಿ ಮಾಡುವುದು ಪ್ರಾಮುಖ್ಯವಾದುದು. ಏಕೆಂದರೆ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಇದು ಕೇವಲ ಹಿಂದೂ ಸಹೋದರಿಯರಲ್ಲಿ ಅಷ್ಟೇ ಅಲ್ಲ, ನವ್ಯ ಮುಸ್ಲಿಂರಲ್ಲಿಯೂ ಇದು ನಡೆಯುತ್ತಿದೆ, ಅತ್ತೆ ಮಾವನ ಕಾಟ, ವರದಕ್ಷಿಣೆಯ ಉಪದ್ರ, ಈ ರೀತಿಯ ಕಿರುಕುಳ ಏನು ಆಗುತ್ತಿದೆ ಇದು ತಪ್ಪಬೇಕು. ಮಾವ, ಅತ್ತೆ, ಗಂಡ, ಎಲ್ಲರೂ ಒಟ್ಟಿಗೇ ಸೇರಿಕೊಂಡು ಕೊಡತಕ್ಕ ಕಿರುಕುಳವನ್ನು ನಾವು ಕಾಣುತ್ತಿದ್ದೇವೆ, ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ತಂದೆಯು ಆಸ್ತಿಯ ಪಾಲು ಹೆಣ್ಣುಮಕ್ಕಳಿಗೂ ಬಂದರೆ ಈ ರೀತಿಯ ಕಿರುಕುಳ ಕಡಿಮೆಯಾಗಬಹುದು. ಮುಸ್ಲಿಮರಲ್ಲಿ ಕೇವಲ ಗಂಡುಮಕ್ಕಳಿಗೆ ಮಾತ್ರವಲ್ಲ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಪಾಲು ಕೊಡಬೇಕೆಂದಿದೆ, ಅಷ್ಟೇ ಅಲ್ಲ, ತಾಯಿಯು ಆಸ್ತಿಯಲ್ಲಿ ಕೂಡ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪಾಲನ್ನು ಕೊಡಬೇಕೆಂದಿದೆ, ಈ ಪ್ರಗತಿಪರವಾದ ವಂಸೂದೆಯನ್ನು ಇವತ್ತು ಏನು ತಂದಿದ್ದೀರಿ ಇದರಲ್ಲಿ ಸ್ವಲ್ಪ ಮಟ್ಟಿಗೆ ದೋಷಗಳಿವೆ. ಇದನ್ನು ಸರಿಪಡಿಸಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಎಲ್ಲರೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ರೀತಿ ಕಳುಹಿಸುವುದರಿಂದ ಬಹಳ ಕಾಲಹರಣವಾಗುತ್ತದೆ. ಈಗ ಹೇಗೂ ಸಾಕಷ್ಟು ತಡವಾಗಿದೆ, ಆದಷ್ಟು ಶೀಘ್ರವಾಗಿ ಇದರಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಈ ವಂಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

೧೨.೪೫ ಪಿ.ಎಂ.

† ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು).— ಸನ್ಮಾನ್ಯ ಅಧ್ಯಕ್ಷರೆ, ಮಹಿಳೆಯರಿಗೆ ಆಸ್ತಿಯ ಪಾಲನ್ನು ಕೊಡುವ ಬಗ್ಗೆ ತಂದಿರತಕ್ಕ ಈ ತಿದ್ದುಪಡಿಯನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಇದುವರೆಗೂ ಗಂಡುಮಕ್ಕಳಿಗೆ ಇದ್ದಂಥ ಸಮಾನ ಹಕ್ಕನ್ನು ಈಗ ಹೆಣ್ಣುಮಕ್ಕಳಿಗೂ ಕೊಡಬೇಕೆಂಬ ಬಗ್ಗೆ ಇಲ್ಲಿ ಒಂದು ಕಾನೂನು ತಿದ್ದುಪಡಿಯನ್ನು ತಂದಿರತಕ್ಕದ್ದು ಸ್ವಾಗತಾರ್ಹ. ಆದರೆ ಯಾವ ಕಳಕಳಿ, ಉದ್ದೇಶ ಈ ಕಾನೂನು ತಿದ್ದುಪಡಿಯಲ್ಲಿದೆ ಇದನ್ನು ಎಲ್ಲರೂ ಸ್ವಾಗತಿಸಬೇಕಾದು ಬಹಳ ಪ್ರಮುಖವಾದುದು. ಈ ತಿದ್ದುಪಡಿಯನ್ನು ತಂದಿರತಕ್ಕ ರೀತಿಯನ್ನು ನೋಡಿದರೆ ಆ ಉದ್ದೇಶ ಈ ತಿದ್ದುಪಡಿಯಿಂದ ಸಫಲವಾಗುವುದಕ್ಕೆ ಸಾಧ್ಯವಿಲ್ಲವೆಂದು ತಪ್ಪು ಮುಖಾಂತರ ನಾನು ಹೇಳಬಯಸುತ್ತೇನೆ. ಏಕೆಂದರೆ, ಈಗಿರತಕ್ಕ ಹಿಂದೂ ಕಾನೂನಿನಲ್ಲಿ ತಾಯಿಗೂ ಪಾಲು ಸಿಕ್ಕತಕ್ಕ ಅವಕಾಶ ಇದೆ. ಆದರೆ ತಾಯಿ ತನ್ನ ಪಾಲನ್ನು ಕೇಳಿದಾಗ ಕೊಡದೇ ಹೋದರೆ ಆಕೆ ಕೋರ್ಟಿಗೆ ಹೋಗತಕ್ಕ ಅವಕಾಶ ಆ ಕಾನೂನಿನಲ್ಲಿ ಇಲ್ಲ. ತನ್ನ ಪಾಲನ್ನು ಕೇಳಿ ಕೋರ್ಟಿನಲ್ಲಿ ದಾವೆಯನ್ನು ಹಾಕಿ ತನ್ನ ಪಾಲನ್ನು ತೆಗೆದುಕೊಳ್ಳತಕ್ಕ ಅವಕಾಶ ಹಿಂದೂ ಕಾನೂನಿನಲ್ಲಿಲ್ಲ. ಅದೇ ರೀತಿ ಈ ಕಾನೂನಿನಲ್ಲಿ ಗಂಡುಮಕ್ಕಳು ತಂದೆಯ ವಿರುದ್ಧ ಕೋರ್ಟಿಗೆ ಹೋಗಿ ತನ್ನ ಪಾಲನ್ನು ಪಡೆಯತಕ್ಕ ಅವಕಾಶ ಇದೆ. ಆದರೆ ಅದೇ ರೀತಿ ಹೆಣ್ಣುಮಕ್ಕಳು ಕೋರ್ಟಿಗೆ ಹೋಗಿ ತಮ್ಮ ಪಾಲನ್ನು ತೆಗೆದುಕೊಳ್ಳತಕ್ಕ ಅವಕಾಶ ಈ ಕಾನೂನಿನಲ್ಲಿಲ್ಲ. ಈಗಿರತಕ್ಕ ಕಾನೂನಿನಲ್ಲಿ when there will be partition between father and the son,, mother is also entitled to equal share. ಎಂದು ಇದೆ. ಅಂದರೆ ಅವರು ಪಾಲು ಮಾಡಿಕೊಳ್ಳುವಾಗ ಮಾತ್ರ ಆಕೆ ತನ್ನ ಪಾಲನ್ನು ಕೇಳಬಹುದು ಆದರೆ ತಾನಾಗಿಯೇ ಪಾಲನ್ನು ಕೇಳತಕ್ಕ ಅವಕಾಶ ತಾಯಿಗೆ ಇಲ್ಲ. ಮಗನಂತೆ ಪಾಲನ್ನು ಕೇಳತಕ್ಕ ಅವಕಾಶವನ್ನು ಈ ಕಾನೂನಿನಲ್ಲಿ ಕೊಟ್ಟಿಲ್ಲ. ಆದ್ದರಿಂದ ಈ ಕಾನೂನಿನ ಉದ್ದೇಶ ಸಂಪೂರ್ಣ ವಿಫಲವಾಗುತ್ತದೆಂದು ನನ್ನ ಅನಿಸಿಕೆ. ಅದೇ ರೀತಿ ಇಲ್ಲಿ ತಂದಿರತಕ್ಕ ತಿದ್ದುಪಡಿ 6(A) (d) reads: ''nothing in clause (b) shall apply to a daughter married Prior to or to a partition which had been effected before the commencement of Hindu Succession (Karnataka Amendment) Act, 1990. ಒಂದು ವೇಳೆ ಆಕೆ ಮದುವೆಯಾಗಿ ಹೋಗಿದ್ದರೆ ಅಥವಾ ಹಿಸ್ಸೆ ಈ ಮೊದಲೇ ಆಗಿದ್ದರೆ ಈ ಕಾನೂನು ಲಾಘವಾಗುವುದಿಲ್ಲವೆಂದು ಹೇಳಿರುವುದರಿಂದ ಈ ಕಾನೂನಿನ ಉದ್ದೇಶ ಸಂಪೂರ್ಣ ವಿಫಲವಾಗುವ ಸಾಧ್ಯತೆ ಇರುವುದರಿಂದ ಹೆಣ್ಣು ಮಕ್ಕಳಿಗೆ ಇದರ ಫಲ ದೊರಕದೇ ಹೋಗುತ್ತದೆ. ನಾವು ಪಾಲನ್ನು ಮಾಡಿಕೊಳ್ಳಲು ಯಾವುದೇ ಕಛೇರಿಗೂ ಹೋಗಬೇಕಾಗಿಲ್ಲ. ಹಿಂದಿನ ರೀತಿಯಲ್ಲಿ

ಕಾಗದವನ್ನು ಹುಟ್ಟಿಸಿಕೊಂಡು ಹೆಣ್ಣುಮಕ್ಕಳಿಗೆ ಪಾಲು ಸಿಕ್ಕದಂತೆ ಪಾಲು ಪಟ್ಟಿಯನ್ನು ಹುಟ್ಟಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆದ್ದರಿಂದ ತಾವು ಇದನ್ನು ತೆಗೆದುಹಾಕಬೇಕು. ಆದ್ದರಿಂದ ಈ ಒಂದು ಸೆಷನ್ 5(ಎ) (ಡಿ)ಯನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದೇನೆ. ತಿದ್ದುಪಡಿಗಳೆನ್ನು ತಂದು ಕೇವಲ ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕು ಕೊಡುತ್ತೇವೆಂದು ಹೇಳಿ ಪ್ರಚಾರವನ್ನು ಗಳಿಸುವ ಉದ್ದೇಶವಾಗುತ್ತದೆಯೇ ಹೊರತು ನಿಜವಾಗಿ ಇದರ ಉದ್ದೇಶ ಸಫಲವಾಗಬೇಕಾದರೆ ಇಲ್ಲಿರತಕ್ಕಂಥ ನ್ಯೂನ್ಯತೆಗಳನ್ನು ತೆಗೆದುಹಾಕಿ ಪರಿಪೂರ್ಣವಾಗಿ ಗಂಡುಮಕ್ಕಳಿಗೆ ಯಾವ ರೀತಿ ಸರಳವಾಗಿ ಪಾಲು ಸಿಗುತ್ತದೆ ಅದೇ ರೀತಿಯಲ್ಲಿ ಅನುಕೂಲವಾಗುವಂತೆ ಮಾಡಬೇಕು. ಪಾಲನ್ನು ಮಾಡುವಾಗ, ಪಾಲನ್ನು ಕೇಳಿ ಕೋರ್ಟಿಗೆ ಹೋದಂಥ ತಾಯಿ ತನ್ನ ಜೀವನ ನಂತರ ಸಿಗುವಂಥ ಒಂದು ವ್ಯವಸ್ಥೆ ಈ ಕಾನೂನಿನಲ್ಲಿ ಇದೆ. ಅದಕ್ಕಾಗಿ ರೆವಿನ್ಯೂ ಇಲಾಖೆಯು ಮೂಲಕ ಭಾಗ ಮಾಡಿಕೊಳ್ಳುವ ವ್ಯವಸ್ಥೆ ಏನು ಇದೆ. ಅದನ್ನು ತೆಗೆದುಹಾಕಬೇಕು. ಕೋರ್ಟಿನ ಮೂಲಕ ಸಮಾನವಾದಂಥ ಪಾಲನ್ನು ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆಯನ್ನು ತಿದ್ದುಪಡಿಯನ್ನು ತರಬೇಕು. ಇಲ್ಲದಿದ್ದರೆ ಕೋರ್ಟಿಗೆ ಹೋಗಿ ಹಣವನ್ನು ಖರ್ಚು ಮಾಡಿ ಆಸ್ತಿಯನ್ನು ಕಳೆದುಕೊಳ್ಳುವುದರ ಜೊತೆಗೆ ಇದ್ದ ಹಣವನ್ನು ಕಳೆದುಕೊಂಡು ತಂದೆ ಮಕ್ಕಳಲ್ಲಿ ದ್ವೇಷ ಬೆಳೆಸಿಕೊಂಡು ಕಷ್ಟಕ್ಕೆ ಗುರಿಯಾಗಿ ಜೀವನ ಸಾಗಿಸುವಂಥ ವ್ಯವಸ್ಥೆಯಾಗಬಾರದು. ಈಗಿರುವ ಪ್ರಕಾರ ರೆವಿನ್ಯೂ ಇಲಾಖೆಯ ಮೂಲಕ ಮಾಡತಕ್ಕಂಥ ವಿಭಾಗವನ್ನು ಡಿಕ್ರಿ ಪ್ರಕಾರ ಕೋರ್ಟಿನ ಮೂಲಕ ಮಾಡಿಕೊಳ್ಳತಕ್ಕ ಬಗ್ಗೆ ತಿದ್ದುಪಡಿಯನ್ನು ತರಬೇಕು ಎಂದು ಹೇಳುತ್ತೇನೆ. ಇದನ್ನು ಆತುರದಿಂದ ತಂದಂಥ ತಪ್ಪುಗಳನ್ನು ಮಾಡುವುದಕ್ಕಿಂತ ಪರಿಪೂರ್ಣವಾದ ರಾಯಿಂದ ತರಬೇಕಾದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಸಿ, ಸದನದ ಹಾಗೂ ಸಾರ್ವಜನಿಕರ ಇನ್ನಷ್ಟು ಅಭಿಪ್ರಾಯಗಳನ್ನು ಪರಿಶೀಲನೆ ಮಾಡಿ ಒಂದು ಪರಿಪೂರ್ಣವಾದ ಕಾನೂನನ್ನು ತರಬೇಕೆಂದು ಸರ್ಕಾರದಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

† **ಶ್ರೀ ಎನ್.ಜಿ. ನಾಯಕ್** (ಮೊಳಕಾಲ್ಮೂರು).— ಮಾನ್ಯ ಅಧ್ಯಕ್ಷರೇ ಇದು ಒಂದು ಗಂಭೀರವಾದಂಥ ವಿಷಯ. ಏತಕ್ಕೆಂದರೆ, ತಂದೆಗೆ ಮಕ್ಕಳೆಲ್ಲರೂ ಒಂದೇ. ಒಬ್ಬ ತಂದೆಗೆ ಹೆಣ್ಣು ಮಕ್ಕಳು ಒಂದೇ, ಗಂಡು ಮಕ್ಕಳು ಒಂದೆ. ಆದರೆ ಹೆಣ್ಣು ಮಕ್ಕಳ ಮೇಲೆ ತಂದೆ ತಾಯಿಗಳಿಗೆ ವಿಶೇಷವಾದ ವಿಶ್ವಾಸವಿರುತ್ತದೆ. ಅವಕ್ಕೋಸ್ಕರವಾಗಿ ಇದು ಒಂದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ಇದರ ಬಗ್ಗೆ ಎಲ್ಲ ಮಾನ್ಯ ಸ್ನೇಹಿತರು ಮಾತನಾಡಿರುತ್ತಾರೆ. ಈ ಮಸೂದೆಯನ್ನು ತಿದ್ದುಪಡಿಮಾಡಿ ಜಮೀನಿನಲ್ಲಿಯೇ ಆಗಲಿ, ಆಸ್ತಿಯಲ್ಲಿಯೇ ಆಗಲಿ ಎಲ್ಲದರಲ್ಲೂ ರೆವಿನ್ಯೂ ಇಲಾಖೆ ಮುಖಾಂತರ ಇತ್ಯರ್ಥ ಮಾಡಿಕೊಳ್ಳುವಂತೆ ಆಗಲು ಅವರಿಗೆ ಒಂದು ಅನುಕೂಲವಾದ ತಿದ್ದುಪಡಿಯನ್ನು ಮಾಡಿದರೆ ತವಗೆ ಕೀರ್ತಿ ಬರುತ್ತದೆ. ಇಂಥವರ ಕಾಲದಲ್ಲಿ ಈ ಕಾನೂನು ಆಯಿತು ಎಂದು ನೆನೆಸಿಕೊಳ್ಳುತ್ತಾರೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಇಷ್ಟು ಅವಕಾಶವನ್ನು ಕೊಟ್ಟದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನು ಈ ಒಂದು ತಿದ್ದುಪಡಿಯನ್ನು ತಂದಿರುತ್ತಾರೆ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಆಸ್ತಿಯನ್ನು ಕೊಡುವ ಕಾಲಕ್ಕೆ ಇವತ್ತು ಏನು ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಪಾಲನ್ನು ಕೊಡಬೇಕು ಎನ್ನುವ ಅಭಿಪ್ರಾಯವನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಇದು ಒಂದು ಒಳ್ಳೆಯ ಅಭಿಪ್ರಾಯವಾದರೂ ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಡೌರಿಡೆತ್ಸ್ ಆಗುತ್ತಿದೆ. ವರದಕ್ಷಿಣೆಯನ್ನು ಪಡೆಯುತ್ತಿರುವುದನ್ನೂ ಸಹ ನೋಡುತ್ತಿದ್ದೇವೆ. ಈ ಕಾನೂನಿನಿಂದ ಯಾವ ಹೆಣ್ಣು ಮಗಳಿಗೆ ಆಸ್ತಿ ಜಾಸ್ತಿ ಸಿಗುತ್ತದೆ ಅಲ್ಲಿಗೆ ಜಾಸ್ತಿ ಜನ ಹೋಗುತ್ತಾರೆನ್ನುವ ಭೀತಿಯನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ಈ ಒಂದು ದಿಸೆಯಲ್ಲಿ ನಿರ್ದಿಷ್ಟವಾದ ಕಾನೂನನ್ನು ಮಾಡಬೇಕಾಗುತ್ತದೆ. ಆಸ್ತಿ ಹೆಣ್ಣುಮಕ್ಕಳಿಗೆ ಬಂದಮೇಲೆ ಆಪರಿಗೆ ಮದುವೆ ಮಾಡುವ ಕಾಲಕ್ಕೆ, ಮದುವೆ ಮಾಡಿಕೊಳ್ಳುವವರ ಬಗ್ಗೆಯೂ ನಿರ್ದಿಷ್ಟವಾದ ಕಾನೂನನ್ನು ಜಾರಿಗೆ ತರುವುದಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಏತಕ್ಕೆಂದರೆ, ಡೌರಿ ಕೊಡುವುದರ ಜೊತೆಗೆ ಆಸ್ತಿ + ಡೌರಿ ಎನ್ನುವುದಕ್ಕೆ ಅವಕಾಶ ಆಗಬಾರದು. ಈ ದೃಷ್ಟಿಯಿಂದ ಮಾನ್ಯ ಕಾನೂನು ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಈಗ ಒಂದು ಮಸೂದೆಯನ್ನು ಇಲ್ಲಿ ತಂದಂಥ ಕಾಲಕ್ಕೆ ಪ್ರಸ್ತಾವನೆಯ ನಾಲ್ಕನೇ ಕಂಡಿಕೆಯನ್ನು ಒಂದೂ ವಿಷಯವನ್ನು ಹಾಕಿದಿರಿ, ಅದರ ಅರ್ಥ ತಪ್ಪಾಗುತ್ತದೆಂದು ನಾನು ತಿಳಿದುಕೊಂಡಿರುತ್ತೇನೆ. ಆ ದೃಷ್ಟಿಯಿಂದ ಯೋಚನೆ ಮಾಡಿದರೆ ಒಳ್ಳೆಯದು. ಈಗ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲನ್ನು ಕೊಡಬೇಕೆನ್ನುವುದನ್ನು ನಾವು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಇದರಿಂದ ಮುಂದೆ ಕೆಲವು ಅನಾಹುತಗಳು ಕೂಡ ಆಗಬಹುದು. ಈಗ ಸಮ್ಮಲ್ಲಿ ಮಿನಿಮಂ ಲ್ಯಾಂಡ್

ಸೀಲಿಂಗ್ ಇಲ್ಲ ಕೆಲವು ಹಳ್ಳಿಗಳಲ್ಲಿ ಅರ್ಧ ಎಕರೆ, ಒಂದು ಎಕರೆ, ಎರಡು ಎಕರೆ, ಮೂರು ಎಕರೆ ನಾಲ್ಕು ಎಕರೆ ಇರುವುದನ್ನು ನಾವು ನೋಡಿದ್ದೇವೆ. ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಂಗಳಿಗೆ ೧೦ ಗುಂಟೆ, ೫ ಗುಂಟೆ ಆಸ್ತಿ ಬಂದರೆ ಅದು ಸಣ್ಣ ಹಿಡುವಳಿಯಾಗುತ್ತದೆ.

ಬಹಳ ಸಣ್ಣ ಹಿಡುವಳಿದಾರರು ನಮ್ಮ ರಾಜ್ಯದಲ್ಲಿದ್ದಾರೆ. ಅದರ ಬಗ್ಗೆ ನಾವು ವಿಚಾರ ಮಾಡುವುದು ಒಳ್ಳೆಯದು. ಬಹಳ ಬಡ ಕುಟುಂಬಕ್ಕೆ ಇದು ವಿಚಿತ್ರವಾದ ಪರಿಸ್ಥಿತಿಯಾಗಿ ನಿರ್ಮಾಣ ವಾಗಬಹುದು. ಜನತಾ ಮನೆಗಳಲ್ಲಿ ವಾಸವಾಗಿರುವವರಿಗೆ ೩-೪ ಜನ ಹೆಣ್ಣುಮಕ್ಕಳು ಇದ್ದರೆ ಅದು ಆ ಭಾಗವಾಗಬೇಕಾಗುತ್ತದೆ. ಆ ದೃಷ್ಟಿಯಿಂದ ಇದಕ್ಕೆ ಪುನಃ ತಿದ್ದುಪಡಿ ತರಬೇಕಾಗುತ್ತದೆ. ಇಲ್ಲದಿದ್ದರೆ ಇದು ನಗೆಪಾಟಲು ಆಗಬಹುದು. ನಮ್ಮಲ್ಲಿ ಅನೇಕರು ಸಣ್ಣ ಹಿಡುವಳಿದಾರರು ಇದ್ದಾರೆ ಅವರಿಗೆ ಒಂದು ಜೊತೆ ಎತ್ತುಗಳನ್ನು ಕೂಡ ಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲ. ಬಾವಿ ತೋಡಿಸುವ ಶಕ್ತಿ ಇರುವುದಿಲ್ಲ. ಹತ್ತು ಗುಂಟೆ ಜಮೀನುಳ್ಳವರು ಹೆಣ್ಣುಮಕ್ಕಳಿಗೆ ಆಸ್ತಿ ಕೊಡಬೇಕೆಂದರೆ ನಾಳೆ ದಿವಸ ದೊಡ್ಡ ಅನಾಹುತವಾಗುತ್ತದೆ. ಜಾಸ್ತಿ ಆಸ್ತಿ ಇದ್ದವರಿಗೆ ಇದನ್ನು ಅಡಾಪ್ಟ್ ಮಾಡಬಹುದೇ ಹೊರತು ಕಡಿಮೆ ಜಮೀನು ಇರುವವರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ೫-೧೦ ಎಕರೆ ಇದ್ದವರು ಹೆಣ್ಣುಮಕ್ಕಳಿಗೆ ಪಾಲು ಕೊಡಬೇಕು. ಅಥವಾ ಇಷ್ಟು ಚದರ ಮನೆ ಇದ್ದವರು ಪಾಲು ಕೊಡಬೇಕೆಂದು ಮಾಡಬೇಕು. ಇಲ್ಲದಿದ್ದರೆ ಸಣ್ಣ ಹಿಡುವಳಿದಾರರಿಗೆ ಭಾರೀ ಅನಾಹುತವಾಗುತ್ತದೆ. ಇದನ್ನು ದಯವಿಟ್ಟು ಸರ್ಕಾರ ಯೋಚನೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

†ಶ್ರೀ ಜಿ. ರಾಜುಗೌಡ (ಹಾನೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ತಂದಿರತಕ್ಕ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಆದರೆ ಕೆಲವು ಭಾಗ ದೋಷಪೂರಿತವಾಗಿರುವುದರಿಂದ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಮತ್ತು ಅವನ್ನು ಸ್ವೀಕರಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಹಿಂದೂ ಅವಿಭಕ್ತ ಕುಟುಂಬದಲ್ಲಿ ಗಂಡುಮಕ್ಕಳು ಹುಟ್ಟಿದಾಗ ಯಾವ ರೀತಿ ಆ ಕುಟುಂಬದ ಆಸ್ತಿಗೆ ಅಧಿಕಾರಿಯಾಗುತ್ತಾರೆ ಅದೇ ರೀತಿ ಹೆಣ್ಣುಮಕ್ಕಳು ಹುಟ್ಟಿದಾಗ ಅವರೂ ಕೂಡ ಆಸ್ತಿಗೆ ಅಧಿಕಾರಿಯಾಗತಕ್ಕ ಹಿದ್ದುಪಡಿಯನ್ನು ತರಬೇಕು ಹಿಂದೂ ಅವಿಭಕ್ತ ಕುಟುಂಬದಲ್ಲಿ ಗಂಡುಮಕ್ಕಳು ಪಾಲಾದಾಗ ಮಾತ್ರ ಹೆಣ್ಣುಮಕ್ಕಳಿಗೆ ಹಕ್ಕು ಬರುತ್ತದೆಂದು ಮಾಡಿದ್ದೀರಿ ಗಂಡುಮಕ್ಕಳು ಯಾವ ರೀತಿ ಅವಿಭಕ್ತ ಕುಟುಂಬದಲ್ಲಿ ಹುಟ್ಟಿದ ತಕ್ಷಣ ಆಸ್ತಿಯ ಪಾಲನ್ನು ಹೊಂದಿರುತ್ತಾರೆ ಅದೇರೀತಿ ಹೆಣ್ಣು ಮಕ್ಕಳು ಹುಟ್ಟಿದ ತಕ್ಷಣ ಅವರಿಗೂ ಕೂಡ ಆಸ್ತಿಯಲ್ಲಿ ಪಾಲು ದೊರೆಯುವಂತೆ ಆಗಬೇಕು. ನೀವು ತಂದಿರತಕ್ಕದ್ದು ಅವಿಭಕ್ತ ಕುಟುಂಬದಲ್ಲಿ ಒಬ್ಬ ಗಂಡು ವಂಗ ಇದ್ದರೆ ಅವನಿಂ ಪಾಲು ಆಗುವುದಿಲ್ಲ. ಆಗ ಹೆಣ್ಣುಮಕ್ಕಳಿಗೆ ಎಲ್ಲಿ ದೊರೆಯುತ್ತದೆ ? ಯಾವ ರೀತಿ ಗಂಡುಮಕ್ಕಳಿಗೆ ಹುಟ್ಟಿದ ತಕ್ಷಣ ಆಸ್ತಿಯ ಹಕ್ಕು ಬರುತ್ತದೋ ಅದೇ ರೀತಿ ಹೆಣ್ಣು ಮಕ್ಕಳಿಗೂ ಕೂಡ ಹುಟ್ಟಿದ ತಕ್ಷಣ ಆಸ್ತಿಯ ಹಕ್ಕು ಬರಬೇಕು. ಕೆಲವು ಅವಿಭಕ್ತ ಕುಟುಂಬಗಳಲ್ಲಿ ಆಸ್ತಿ ಹೆಂಗಸರ ಹೆಸರಿನಲ್ಲಿ ಇರುತ್ತದೆ. ಅಂದರೆ ತಾಯಿಯ ಹೆಸರಿನಲ್ಲಿ ಇರುತ್ತದೆ, ಆಗ ಗಂಡುಮಕ್ಕಳಿಗೆ ಹಕ್ಕು ಬರುವುದಿಲ್ಲ, ತಾಯಿ ಸತ್ತಾಗ ಹೆಣ್ಣುಮಕ್ಕಳಿಗೆ ಹಕ್ಕು ಬರುತ್ತದೆ. ಈ ಲೇವಾದೇವಿ ಸಮಗ್ರವಾಗಿ ಆಗಲೆಬೇಕೆಂದರೆ ಅವಿಭಕ್ತ ಕುಟುಂಬದ ಹೆಂಗಸರ ಆಸ್ತಿ, ಗಂಡಸರ ಆಸ್ತಿ. ಪಿತ್ರಾರ್ಜಿತ ಆಸ್ತಿ, ಸ್ವಯಾರ್ಜಿತ ಆಸ್ತಿ ಯಾವುದೇ ಇರಲಿ ಅದನ್ನು ಸಂಪೂರ್ಣವಾಗಿ ಭಾಗ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಮೇಲ್ಕೋಟಕ್ಕೆ ತಾಯಿದೆ ಪ್ರಕಾರ ಹೆಣ್ಣು ಮಕ್ಕಳಿಗೆ ಆಸ್ತಿ ಸಿಕ್ಕುತ್ತದೆಂದರೂ ಒಳಹೊಕ್ಕು ನೋಡಿದರೆ ಗಂಡು ಮಕ್ಕಳಿಗೆ ಭಾಗ ಆಗುವಾಗ ಮಾತ್ರ ಹೆಣ್ಣು ಮಕ್ಕಳಿಗೆ ಪಾಲು ಬರುತ್ತದೆಂಬುದನ್ನು ನಿಷೇಧ ಮಾಡಬೇಕು. ಎರಡು ಲಕ್ಷ ರೂಪಾಯಿ ಆಸ್ತಿ ಬರುತ್ತದೆಂದರೆ ಒಂದೂವರೆ ಲಕ್ಷ ರೂಪಾಯಿ ಸಾಲ ಇರುತ್ತದೆ. ಅಂಥ ಸಂದರ್ಭಗಳಲ್ಲಿ ಆ ಸಾಲಕ್ಕೆ ಜವಾಬ್ದಾರಿ ಮಾಡಿ ಉಳಿದದ್ದನ್ನು ಭಾಗ ಮಾಡಬೇಕು. ಹೆಣ್ಣುಮಕ್ಕಳಿಗೆ ಸಾಲ ಬರುವುದು ಸರಿಯಲ್ಲ. ಅಂಥದ್ದನ್ನು ಕೊಟ್ಟರೂ ಗಂಡ ತಿರಸ್ಕಾರ ಮಾಡಬಹುದು. ಹಿಂದೂ ಅವಿಭಕ್ತ ಕುಟುಂಬದಲ್ಲಿರತಕ್ಕ ವಸ್ತುವಾಗಿ ಏನಿದೆ ಸಾಲ ಏನಿದೆ ಅದೆಲ್ಲವನ್ನು ಲೆಕ್ಕಾಚಾರ ಹಾಕಿ ಉಳಿದ ಆಸ್ತಿಯನ್ನು ಸಮವಾಗಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಕೊಡತಕ್ಕ ತಿದ್ದುಪಡಿಗೆ ಒಪ್ಪುತ್ತೀರೆಂದು ನಂಬಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಅಧ್ಯಕ್ಷರೆ, ಹೊಸದಾಗಿ ಈ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಾನ್ಯ ಶಿವಣ್ಣನವರು ಈ ಮಸೂದೆಯನ್ನು ಇಷ್ಟು ಅವಸರದಲ್ಲಿ ಏತಕ್ಕೆ ಸದನದ ಮುಂದೆ ತಂದಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈಗ ಹಿಂದೂ ಸಮಾಜದಲ್ಲಿ ಇರತಕ್ಕ ಹೆಣ್ಣುಮಕ್ಕಳಿಗೆ ಸಮಾನವಾದ ಆಸ್ತಿ ಹಕ್ಕನ್ನು ಕೊಡಬೇಕೆಂಬ ಬಗ್ಗೆ ಈ ಸದನದ ಎರಡೂ ಕಡೆಯ ಸದಸ್ಯರಿಗೂ ತಕರಾರಿಲ್ಲ. ಹಿಂದೂ ಸಕ್ಸೆಷನ್ ಆಕ್ಟ್ ಗೌರ್ನಮೆಂಟ್ ಆಫ್ ಇಂಡಿಯಾದ್ದು ಇದೆ. ಅದನ್ನು ಓದಿ ಅದರ ಕನ್‌ಕರೆನ್ಸ್‌ನಲ್ಲಿ ಮಾಡಿದ್ದೀರಾ ಎಂಬುದನ್ನು ಪೂರ್ಣವಾಗಿ ಓದುವುದ

ಕ್ಕಾಗಲಿಲ್ಲ. ಆದರೆ ಮೇಲ್ನೋಟಕ್ಕೆ ನೋಡಿದಾಗ ಬಹಳ ಅವಸರದಲ್ಲಿ ಇದನ್ನು ಮಾಡಿರತಕ್ಕದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಮಾಡಿದರೆ ಇದು ಪೇಪರ್‌ನಲ್ಲಷ್ಟೇ ಉಳಿಯುತ್ತದೆ. ಬಿಲ್ ಆಕ್ಟ್ ಆದಮೇಲೆ ಇದನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಈ ಮಸೂದೆಯಲ್ಲಿ ಹೆಣ್ಣು ಮಕ್ಕಳಿಗೆ ಪಾರ್ಟಿಷನ್ ಕೇಳುವುದಕ್ಕೆ ಯಾವುದೇ ತರಹದ ಪ್ರೊಟೆಕ್ಷನ್ ಕೊಡುತ್ತಿಲ್ಲ. ಇವತ್ತು ಸಮಾನವಾದ ಆಸ್ತಿ ಹೆಣ್ಣುಮಕ್ಕಳಿಗೆ ಕೊಡಲೇಬೇಕು. ಅದರಿಂದ ವರದಕ್ಷಿಣೆ ಸಾವುಗಳು ಸ್ವಲ್ಪ ಕಡಿಮೆ ಯಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ನಮ್ಮಲ್ಲಿ ಅನೇಕ ಜನ ಮಹಿಳಾ ಸದಸ್ಯರು ಇದ್ದಾರೆ. ಅವರೂ ಈ ಮಸೂದೆಯನ್ನು ಸರಿಯಾಗಿ ಓದುವುದಕ್ಕೆ ಆಗಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರಿಂದಲೇ ಅವರು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಇದನ್ನು ಅವಸರದಲ್ಲಿ ಮಾಡುವುದೇನಿದೆ ? ನಿಮ್ಮ ಸರ್ಕಾರದ ಇನ್ನೂ ಸ್ವಲ್ಪ ದಿನ ಇರುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಒಬ್ಬ ಆಡಳಿತ ಪಕ್ಷದ ಸದಸ್ಯರು.—ಇನ್ನೂ ನಾಲ್ಕು ವರ್ಷ ಇರುತ್ತದೆ. ಅದರ ಬಗ್ಗೆ ಯೋಚನೆ ಮಾಡುವಹಾಗಿಲ್ಲ, ಕಾದು ನೋಡಿರಿ.

ಅಧ್ಯಕ್ಷರು.—ಅದು ಷಾರ್ಟ್ ಆಫ್ ದಿ ಬಿಲ್ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಓಟಿಗೋಸ್ಕರ, ಪ್ರಚಾರಕ್ಕೋಸ್ಕರ ಇದನ್ನು ಮಾಡುವುದು ಬೇಡ ಮಾನ್ಯ ಸದಸ್ಯರಾದ ಕೆ.ಎಚ್. ರಂಗನಾಥ್ ಅವರು ಬಹಳ ಚೆನ್ನಾಗಿ ಹೇಳಿದರು. ಅವರು ಹಿರಿಯ ಸದಸ್ಯರು. ಇದರಿಂದ ವಕೀಲರಿಗೆ ವಸೂಲಿ ಮಾಡುವುದಕ್ಕೆ ಅನುಕೂಲ ಆಗುತ್ತದೆ, ಕಿತ್ತಾಟಗಳು ಜಾಸ್ತಿ ಯಾಗುತ್ತವೆ. ಇದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಪ್ರತಿಯೊಂದು ಕುಟುಂಬದಲ್ಲೂ ಬೆಂಕಿ ಹಚ್ಚುವ ಕೆಲಸ ನಾವು ಮಾಡಬಾರದು ನಮ್ಮಲ್ಲೇ ಅನೇಕ ಭಿನ್ನಾಭಿಪ್ರಾಯಗಳಿವೆ. ಈ ಮಸೂದೆ ಪ್ರಕಾರ ಯಾವತ್ತೋ ಒಂದು ಡೆಡ್ ಲೈನ್ ಕೊಡುತ್ತೀರಿ. ಇದು ಎಫ್‌ಕ್ಟ್‌ಗೆ ಬಂದ ದಿವಸದಿಂದ ಯಾವ ಹೆಣ್ಣುಮಗಳಿಗೆ ಮದುವೆಯಾಗಿರುತ್ತದೆ ಆಕೆಗೆ ಆಸ್ತಿ ಹಕ್ಕಿರುವುದಿಲ್ಲ. ಮತ್ತು ಯಾರಿಗೆ ಮದುವೆ ಆಗಿರುವುದಿಲ್ಲ ಅವರಿಗೆ ಆಸ್ತಿ ಹಕ್ಕಿರುತ್ತದೆ. ಅದು ನನ್ನ ಅಭಿಪ್ರಾಯದಲ್ಲಿ ಸರಿ. ಆದರೆ ಕೆಲವರು ಇದು ಸರಿಯಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಇದೆಲ್ಲಾ ದೀರ್ಘವಾಗಿ ಯೋಚನೆ ಮಾಡಬೇಕು. ತಮಗೆ ಮೆಜಾರಿಟಿ ಇದೆ. ನಾಲ್ಕು ವರ್ಷವೋ ಹತ್ತು ವರ್ಷವೋ ಇರುತ್ತೇವೆ ಎಂದು ಅವರು ಹೇಳಿದರಲ್ಲ ಹಾಗೆ ತಮಗೆ ಮೆಜಾರಿಟಿ ಇರುವುದರಿಂದ ನೀವು ಏನು ಹೇಳಿದರೂ ಕೈ ಎತ್ತುತ್ತಾರೆ. ಅದಲ್ಲ ವಿಚಾರ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಹಿಂದೂ ಸಮಾಜದ ಹೆಣ್ಣು ಮಕ್ಕಳಿಗೆ ನಿಜವಾಗಿ ಅನುಕೂಲ ಮಾಡಬೇಕು, ವರದಕ್ಷಿಣೆ ಸಾವು ಹೆಣ್ಣುಮಕ್ಕಳ ಶೋಷಣೆ ಕಡಿಮೆ ಯಾಗಬೇಕು ಎಂಬ ಉದ್ದೇಶ ನಿಮಗೂ ಇದೆ, ನಮಗೂ ಇದೆ ನಿಮಗೆ ಆ ಕೀರ್ತಿ ಬರುತ್ತದೆ. ತಾವು ದಯವಿಟ್ಟು ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ನಾವೆಲ್ಲಾ ಕುಳಿತು ಕೊಂಡು ದೀರ್ಘವಾಗಿ ಯೋಚನೆ ಮಾಡೋಣ ಮುಂದಿನ ಅಧಿವೇಶನದಲ್ಲಿ ಪಾಸ್ ಮಾಡಿ, ತಮಗೇ ಆದರ ಕೀರ್ತಿಯನ್ನು ಕೊಡೋಣ.

†ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಯವರು).—ಮಾನ್ಯ ಅಧ್ಯಕ್ಷರೆ, ಇದು ಅವಸರದಿಂದ ತಂದಂಥ ಬಿಲ್ ಅಲ್ಲ. ೧೯೮೭ ರಿಂದ ಇದು ಚರ್ಚೆಮಾಡಿ ತಂದಿದೆ. ಮಾನ್ಯ ಸದಸ್ಯರು ಹೇಳಿದಮೇಲೆ ನನಗೂ ಕೂಡ ರೀಕನ್‌ಸಿಡರೇಷನ್ ಮಾಡಬೇಕು ಎಂದು ಅನ್ನಿಸುತ್ತಿದೆ. ಇದು ಬಹಳ ಸಿಂಪಲ್ ಇದೆ. For parents sons and daughters are equal. Our Constitution says that under fundamental rights all are equal Before-Law opportunity should be given to all. Under such circumstance when a daughter is discriminated she has been just given protection under Hindu Succession Act of 1956, Except coparcenery property she is having equal rights in the family. Like that we have brought Section 6A and B giving equal protection.

MR. SPEAKER.—Can she enforce a partition ?

SRI B. SHIVANNA.—Yes. She has got a right. She becomes equivalent to son.

SRI R.V. DESHAPANDE.—Under what Act ? The Hindu Succession Act of 1956 is a Central enactment. We cannot override it.

Any amendment which is brought here should be such that it should not override the central enactement.

MR. SPEAKER,—It should not be in conflict with that.

SRI R. V. DESHAPANDE—Yes, You show me a Section in Hindu Succession Act wherein in a Mitakshara family a daughter by birth can ask for a partition ? which is that section ?

SRI B. SHIVANNA.—The Hindu Succession Act 1956 is a Central Act. The State Govenment can also have the Act without conflicting with the Central Act, Now, the problem is that every detail has not been covered as you said correctly because when son becomes equivalent to the daughter both should get equal rights. What we have said, the daughter, of a coparcener shall by birth become a coparcener in her own right in the same manner as the son and have the same rights in the coparcenary property as she would have had if she had been a son.....

SRI R. V. DESHAPANDE.—Can it overside the Central enactment ? You cannot do something against the Central enactment.

MR. SPEAKER.—If it is complementary it is a support to you.

SRI B. SHIVANNA.—It is an Improvement. Under such circumstances, I accept the proposal to bring this Bill before the Joint Select Committee.

MR. SPEAKER—Can we take that motion for reference to the Joint Select Committee will be moved little later ?

SRI P. G. R. SINDHIA.—The Minister has agreed to refer it to the Joint Select Committee.

ಅಧ್ಯಕ್ಷರು.—ಅದಕ್ಕೆ ಒಂದು ಕಾನೂನು ಇದೆ. ಆದರ ಪ್ರಕಾರ ಹೆಸರುಗಳನ್ನು ನಮೂದು ಮಾಡಬೇಕು. ಮೋಷನ್ ಮೂವ್ ಮಾಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಂತ್ರಿಗಳು ಒಪ್ಪಿಕೊಂಡಮೇಲೆ ಮತ್ತೆ ಡಿಸ್ಕಷನ್ಸ್‌ಗೆ ಬರುವುದು ಬೇಡ. ಮಂತ್ರಿಗಳು ಒಪ್ಪಿದ ಮೇಲೆ ಆಯಿತು.

ಅಧ್ಯಕ್ಷರು.—ನಾನು ಅನುಮತಿ ಕೊಟ್ಟೆ, ಅವರು ಒಪ್ಪಿದ್ದಾರೆ, ಎಂದ ಮೇಲೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಆಯಿತೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ತಾವು ಮಾಡಬೇಕು.

ಅಧ್ಯಕ್ಷರು.—ನಾನು ಅಲ್ಲ ಮಾಡುವುದು. A formal motion on behalf of the Government for referring this to the Joint Select Committee and taking leave of this House should come and then he should give the names of members of the Joint Select Committee. There are certain procedures. ಆ ಪ್ರೊಸೀಜರನ್ನು ನಾವು ಮಾಡಬೇಕಾಗುತ್ತದೆ. So we will take up this Bill for consideration again, little later, where a formal motion referring this to the Joint Select Committee will be made.

ಅಧ್ಯಕ್ಷರು.—ಈಗ ರಾಜ್ಯದಲ್ಲಿನ ಮಂತೀಯ ಗಲಭೆಗಳ ಬಗ್ಗೆ ಚರ್ಚೆಯನ್ನು ಮುಂದುವರಿಸೋಣ. ಶ್ರೀ ಪಾಟಾಳ್ ನಾಗರಾಜ್ ಅವರೇ ತಮ್ಮ ಭಾಷಣವನ್ನು ಮುಂದುವರಿಸಬೇಕು.

(ಈ ಸಮಯದಲ್ಲಿ ಕೆಲವು ಸದಸ್ಯರು ಮಧ್ಯಾಹ್ನದ ಬಿಡುವಿನ ಬಗ್ಗೆ ಅಧ್ಯಕ್ಷರ ಗಮನ ಸೆಳೆದರು)

ಅಧ್ಯಕ್ಷರು.–ಈ ಚರ್ಚೆಯ ಮೇಲೆ ಬಹಳ ಜನರು ಮಾತನಾಡುವವರು ಇರುವುದರಿಂದ ಬಿಡುವು ಚೀಡವೆಂದುಕೊಂಡಿದ್ದೆ. ಆಯಿತು, ಬಿಡುವು ಕೊಡೋಣ. ಶ್ರೀ ವಾಟಾಳ್ ನಾಗರಾಜ್ ಅವರೇ ತಾವು ಬಿಡುವಿನ ನಂತರ ಮಾತನಾಡಿ. ಈಗ ಸದನವು ಮೇಲೆದ್ದು ಮತ್ತೆ ೨ ಗಂಟೆ ೧೦ ನಿಮಿಷಕ್ಕೆ ಸಮಾವೇಶಗೊಳ್ಳುವುದು.

(ಸದನವು ೧ ಗಂಟೆ ೯ ನಿಮಿಷಕ್ಕೆ ಮುಂಕ್ತಾಯವಾಗಿ ೨ ಗಂಟೆ ೧೦ ನಿಮಿಷಕ್ಕೆ ಸೇರಲು ನಿಶ್ಚಯಿಸಿತು.

ಸದನವು ಮಧ್ಯಾಹ್ನ ೨–೨೬ಕ್ಕೆ ಪುನಃ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು.

ಮಂತ್ರಿಯಂವರಿಂದ ಹೇಳಿಕೆ

ಮೈಸೂರಿನಲ್ಲಿ ಕುಮಾರಿ ಎಸ್, ಜಿ, ಮಹೇಶ್ವರಿ ಎಂಬ ಹುಡುಗಿಯ ಮೇಲೆ ಅತ್ಯಾಚಾರವೆಸಗಿರುವ ಬಗ್ಗೆ

ಶ್ರೀ ಧರ್ಮಸಿಂಗ್, (ಗೃಹ ಸಚಿವರು)—ಪೂಜ್ಯ ಅಧ್ಯಕ್ಷರೆ, ಕುಮಾರಿ ಎಸ್. ಜಿ. ಮಹೇಶ್ವರಿ ಬಿನ್. ಶ್ರೀ ಕೆ. ಎಸ್. ಜಯದೇವಯ್ಯ. ಇವಳು ದೂರನ್ನು ನೀಡಿದ್ದು ತನ್ನನ್ನು ವಿದೇಶಿ ಮಹಿಳೆ ಶ್ರೀಮತಿ ಅಸಿಯ ಸಯೀದ್, ರವರು ದಿನಾಂಕ ೩ನೇ ಅಕ್ಟೋಬರ್ ೧೯೯೦ ರಿಂದ ೨೦ನೇ ಅಕ್ಟೋಬರ್ ೧೯೯೦ ರ ವರೆಗೆ ಮೈಸೂರು ನಗರದ ಅನೇಕ ಭಾಗಗಳಿಗೆ ಕರೆದು ಕೊಂಡು ಹೋಗಿದ್ದು ವಿದೇಶಿಯರೂ ತನ್ನ ಮೇಲೆ ಅತ್ಯಾಚಾರ ವೆಸಗಿರುತ್ತಾರೆಂದು ತಿಳಿಸಿದ್ದಾಳೆ. ಈ ದೂರಿನ ಮೇರೆಗೆ ನಜರಾಬಾದ್ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ ೧೮೮/೯೦ ಮೇರೆಗೆ ಕೇಸ್ ದಾಖಲು ಮಾಡಿಕೊಂಡು ಮುಂದಿನ ತನಿಖೆಯನ್ನು ಕೈಗೊಳ್ಳಲಾಯಿತು. ತನಿಖೆಯ ಪ್ರಕಾರ ಕುಮಾರಿ ಮಹೇಶ್ವರಿಗೆ ೧೫ ವರ್ಷ ವಯಸ್ಸು ಆಗಿದ್ದು ನಜರಾಬಾದ್ ಮೊಹಲ್ಲಾದ ಅರಸು ಬೋರ್ಡಿಂಗ್ ಸ್ಕೂಲ್‌ನಲ್ಲಿ ೧೦ನೇ ತರಗತಿಯಲ್ಲಿ ಓದುತ್ತಿರುವುದು ಕಂಡು ಬಂದಿದೆ. ಶ್ರೀಮತಿ ಅಸಿಯ ಸೆಯೀದ್ ಅವರು ವಿದ್ಯಾವರ್ಧಕ ಕಾಲೇಜಿನಲ್ಲಿ ಓದುತ್ತಿದ್ದು ಕು. ಮಹೇಶ್ವರಿಯ ಪಕ್ಕದ ನಿವಾಸಿಯಾಗಿರುತ್ತಾಳೆ. ಶ್ರೀಮತಿ ಅಸಿಯ ಸಯೀದಳು ಕು. ಮಹೇಶ್ವರಿ ಇವಳನ್ನು ಮೋಡಿ ಮಾಡಿ ವಿವಿಧ ಸ್ಥಳಗಳಿಗೆ ವಿವಿಧ ಸಮಯಗಳಲ್ಲಿ ವಿವಿಧ ಸಂದರ್ಭಗಳಲ್ಲಿ ತನ್ನೊಂದಿಗೆ ಸಂಪರ್ಕ ವಿರುವ ವಿದೇಶಿಯರೊಂದಿಗೆ ಕರೆದುಕೊಂಡು ಹೋಗಿರುವುದು ಕಂಡುಬಂದಿದೆ.

ಈ ಅತ್ಯಾಚಾರಕ್ಕೊಳಗಾಗಿರುವ ಕು. ಮಹೇಶ್ವರಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು ೧೪ ವರ್ಷ ೯ ತಿಂಗಳು ಆಗಿರುವುದು ಕಂಡುಬಂದಿದೆ. ಈ ತನಿಖೆಯಿಂದಾಗಿ ಅತ್ಯಾಚಾರವೆಸಗಿರುವುದು ಸ್ಪಷ್ಟಪಟ್ಟಿದ್ದು ದಿನಾಂಕ ೧–೧೧–೧೯೯೦ ರಂದು ಈ ಅಪರಾಧಕ್ಕೆ ಒಳಪಟ್ಟ ಎಲ್ಲ ಅಪರಾಧಿಗಳನ್ನು ಬಂಧಿಸಿ ದಿನಾಂಕ ೨೮–೧೧–೧೯೯೦ರ ವರೆಗೆ ನ್ಯಾಯಾಲಯದ ಕಸ್ಟಡಿಗೆ ಒಳಪಡಿಸಲಾಗಿದೆ. ಇವರುಗಳ ವಿವರಗಳು ಈ ಕೆಳಕಂಡಂತೆ ಇದೆ.

೧. ಶ್ರೀಮತಿ ಅಸಿಯ ಸಯೀದ್ ಬಿನ್ ಸಯೀದ್, ೨೩ ವರ್ಷ, ೧ನೇ ಬಿ.ಕಾಂ., ವಿದ್ಯಾವರ್ಧಕ ಕಾಲೇಜು, ಮೈಸೂರು.

೨. ಇಬ್ರಾಹಿಂ ಬಿನ್ ಮೆಹರೂನ್ ೨೨ ವರ್ಷ ೩ನೇ ಬಿ.ಕಾಂ., ವಿದ್ಯಾವರ್ಧಕ ಕಾಲೇಜು, ಮೈಸೂರು.

೩. ಆದಂ ಬಿ. ಅಬ್ದುಲ್ ೨೫ ವರ್ಷ, ೧ನೇ ವರ್ಷದ ಕಂಪ್ಯೂಟರ್ ಸೈನ್ಸ್. ಎನ್. ಐ. ಐ. ಟಿ ಮೈಸೂರು.

೪. ಆಲಿ ಅಹ್ಮದ್ ಹಸನ್ ಸುಲ್ತಾನ್ ರಬ್ಬಾಸ್ ಬಿನ್ ಅಹ್ಮದ್, ೨೨ ವರ್ಷ, ೨ನೇ ಬಿ.ಕಾಂ., ವಿದ್ಯಾವರ್ಧಕ ಕಾಲೇಜು, ಮೈಸೂರು,

೫. ಸಮೀರ್ ಹುಸೇನ್ ಯೂಸಫ್ ಬಿನ್ ಮಹ್ಮದ್ ಯೂಸಫ್, ೨೧ ವರ್ಷ, ಬಿ.ಕಾಂ., ವಿದ್ಯಾರ್ಥಿ ವಿದ್ಯಾವರ್ಧಕ ಕಾಲೇಜು, ಮೈಸೂರು.